ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಸಿದ್ದಪ್ಪ.—ಚೆಂಡರುದಾರರಿಗೆ ಈ ಕೆಲಸ ವಹಿಸದೆ ಸರ್ಕಾರದವರೇ ಕಟ್ಟಿಸುವುದಕ್ಕೇನು ಕಾರಣ?

ಶ್ರೀ ಕಡಿದಾಳ್ ಮಂಜಪ್ಪ.—ಚೆಂಡರುಗಳಲ್ಲಿ ನೂಚಿಸಿದ್ದ ಅಂಶಗಳು ಅಸಮರ್ಪಕವಾಗಿದ್ದುದರಿಂದ ಮತ್ತು ಇಲಾಖೆಯಿಂದಲೇ ಸುಲಭವಾಗಿ ಮಾಡ ಬೇಕೆಂಬ ಉದ್ದೇಶದಿಂದ ಹಾಗೆ ಮಾಡಲಾಗಿದೆ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ಕಡಮೆ ಖರ್ಚಿನಲ್ಲಿ ಈ ಕೆಲಸವಾಗುತ್ತದೆಯೆಂದು ಭಾವಿಸಬಹುದೆ?

ಶ್ರೀ ಕಡಿದಾಳ್ ಮಂಜಪ್ಪ.—ಆಗಬಹುದು.

ಶ್ರೀ ಜೆ. ಮಹಮ್ಮದ್ ಇಮಾಂ.—ಸಾರ್ವಜನಿಕರಿಂದಲಾಗಲಿ ಅಥವಾ ಈ ಸಭೆಯವರಿಂದಲಾಗಲಿ ಇಂಥ ಕಟ್ಟಡ ಕಟ್ಟ ಬೇಕೆಂದು ಸರ್ಕಾರಕ್ಕೇನಾದರೂ ಮನವಿ ಬಂದಿತ್ತೆ?

ಶ್ರೀ ಕಡಿದಾಳ್ ಮಂಜಪ್ಪ.—ಇದು ನಿರ್ಧಾರವಾದುದು 1951ರಲ್ಲಿ; ಆಗ ಬಂದಿತ್ತು. ಇದನ್ನು ಕಟ್ಟಬೇಕಾದ ಅವಶ್ಯಕತೆಯೂ ಇತ್ತು.

ಶ್ರೀ ಜೆ. ಮಹಮ್ಮದ್ ಇಮಾಂ.—ಅವಶ್ಯಕತೆಯಿದ್ದುದು ಹೈಕೋರ್ಟು ಕಟ್ಟಡ ಕಟ್ಟುವುದಕ್ಕೆ; ಅಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲ; ರೆಜಿಸ್ಟ್ರೇಚರ್ ಕಟ್ಟಡ ಕಟ್ಟುವುದಕ್ಕೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಇಂಥ ದೊಡ್ಡ ಕಟ್ಟಡವನ್ನು ನಿರ್ದಿಷ್ಟವಾದ ಅಂದಾಜಿಲ್ಲದೆ ಕಟ್ಟುವುದು ಅಪಾಯಕರವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಅಪಾಯವೇನೂ ಕಾಣಲಿಲ್ಲ. ಇದಕ್ಕೆ ದಕ್ಷರಾದ ಮತ್ತು ಪ್ರಾಮಾಣಿಕರಾದ ಇಂಜಿನಿಯರನ್ನು ನೇಮಕಮಾಡಿದ್ದೇವೆ.

Sri J. MOHAMED IMAM.—Is it not necessary that we should be sure of the cost that would be incurred before we undertake? Is it not a big venture? Is it not one of the codal rules that technical sanction must be given?

Sri KADIDAL MANJAPPA.—Hon'ble Member was a Minister for Public Works. He knows well that in many cases works are being taken up without technical sanction.

Sri J. MOHAMED IMAM.—I am not aware of any work being taken up without some estimate being sanctioned. ಇದಕ್ಕೆ ಅಂದಾಜಿಲ್ಲದಿರುವುದು ಬಹಳ ದೊಡ್ಡ ಲೋಪವಲ್ಲವೆ? ಅದರಿಂದ ಎಷ್ಟು ಬೇಕಾದರೂ ಖರ್ಚುಮಾಡಬಹುದಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾಗುವುದಿಲ್ಲ, ಖರ್ಚನ್ನು ಬಹಳ ಹಿಡಿತದಲ್ಲಿಟ್ಟು ಕೆಲಸಮಾಡುತ್ತೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ತಮ್ಮ ಪ್ಲಾನಿನ ಪ್ರಕಾರ ಕೊನೆಗೆ ಎಷ್ಟಾಗಬಹುದು? ಅದನ್ನು ಯಾವ ಆಧಾರದ ಮೇಲೆ ಹೇಳುವುದು?

ಶ್ರೀ ಕಡಿದಾಳ್ ಮಂಜಪ್ಪ.—ಇಂಜಿನಿಯರುಗಳ ಆಧಾರದ ಮೇಲೆ ಹೆಚ್ಚು ಅಂದರೆ 65 ಲಕ್ಷ ರೂಪಾಯಿಗಳಾಗಬಹುದು.

ಶ್ರೀ ಜೆ. ಮಹಮ್ಮದ್ ಇಮಾಂ.—ಪ್ಲಾನು, ಅಂದಾಜು ಇಲ್ಲದೆ ಇಷ್ಟೆ ಎಂದು ಹೇಗೆ ಹೇಳುವುದು?

ಶ್ರೀ ಕಡಿದಾಳ್ ಮಂಜಪ್ಪ.—ಮೊದಲು 1951ರಲ್ಲಿ 23.64 ಲಕ್ಷ ರೂಪಾಯಿಗಳಿಗೆ ಅಂದಾಜು ತಯಾರಾಯಿತು. ಆನಂತರ ಅದು ತಿದ್ದುಪಾಟಾಗಿ 50 ಲಕ್ಷಕ್ಕೆ ಅಂದಾಜಾಗಿದೆ. ಅದನ್ನು 'Scrutinise' ಮಾಡುತ್ತಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಅಂದಾಜಾದ ಮೇಲೆ ಏಕೆ Scrutinise ಮಾಡಿ ಮಂಜೂರು ಮಾಡಿಲ್ಲ?

Sri KADIDAL MANJAPPA.—Not completely ready. It is being scrutinised.

Amount spent by P.W.D. in Mudigere Taluk.

Q.—168. Srimathi B.L. SUBBAMMA (Chikmagalur-Mudigere).—

Wil the Government be pleased to state :—

(*a*) the amount spent by the P. W. D. for carrying out the work in Mudigere taluk every year;

(*b*) whether they intend to set up a P. W. D. Sub-Division for that place?

A.—Sri KADIDAL MANJAPPA (Minister for Revenue and Public Works).—

(*a*) About Rs. 2 lakhs.

(*b*) There is at present no proposal to that effect.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—(*a*) ಪ್ರಶ್ನೆಗೆ ಉತ್ತರವಾಗಿ ಎರಡು ಲಕ್ಷ ರೂಪಾಯಿಗಳ ಕೆಲಸವೆಂದು ಹೇಳಿರುವುದು ಒಂದೇ ಕೆಲಸಕ್ಕೆ ಕೊಟ್ಟಿರುವುದೇ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲ, ಬೇರೆ ಕೆಲಸಗಳಿವೆ. ಅದು ಸಾಮಾನ್ಯವಾಗಿ ವರ್ಷೇ ವರ್ಷೇ ನಡೆಯುವ ಕೆಲಸ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಅಲ್ಲಿಗೊಂದು ಸಬ್ ಡಿವಿಜನ್ನನ್ನು ಕೊಡಬೇಕೆಂದು ಕೋರಿಕೆ ಬಂದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಇಂಜನಿಯರಿಂಗ್ ಇಲಾಖೆಯಿಂದ ಮತ್ತು ಸಾರ್ವಜನಿಕರಿಂದ ಬಂದಿದೆ. ಅದು ಪರ್ಯಾಲೋಚನೆಯಲ್ಲಿದೆ.

Exemption of Sales Tax on Mutton.

Q.—267. Sri B. T. KEMPA RAJ (Bangalore South--Scheduled Castes).—

Will the Government be pleased to state :—

(*a*) on what date the exemption of 80 per cent of Sales Tax was allowed for mutton and other articles;